**ಕರ್ನಾಟಕ ಸರ್ಕಾರ**
**(ಪಿ.ಆರ್.ಪಿ.67)**

**ಹೇಳಿಕೆ ಹಾಳೆ**
**(ಆರ್.ಪಿ.ಸಂಖ್ಯೆ 57)**
**ನಮೂನೆ ಸಂಖ್ಯೆ 4**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 103/2015**

**DW-1**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಎಸ್ ವೆಂಕಟೇಗೌಡ |
| ತಂದೆಯ ಹೆಸರುಃ | : | ಲೇಟ್ ಸಗನೇಗೌಡ |
| ವಯಸ್ಸುಃ | : | 74 ವರ್ಷ |
| ಉದ್ಯೋಗಃ | : | ನಿವೃತ್ತ ವ್ಯವಸ್ಥಾಪಕರು |
| ವಾಸ | : | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 24.07-2026:**

**ಮುಖ್ಯ ವಿಚಾರಣೆಃ ಆರೋಪಿತರ ಪರ ವಕೀಲರಿಂದಃ**

ಆರೋಪಿತರು ನನಗೆ ಗೊತ್ತು. ಅವರು ನನ್ನ ಹೆಂಡತಿಯ ಅಕ್ಕನ ಮಗ. ನಾನು ಹಾಸನದ ಉದಯಗಿರಿಯಲ್ಲಿ ವಾಸವಿದ್ದೇನೆ. ನನಗೆ 3 ಜನ ಹೆಣ್ಣುಮಕ್ಕಳು. ಒಬ್ಬಳು ಇಂಗ್ಲೇಂಡ್ ನಲ್ಲಿ ವೈದ್ಯ ವೃತ್ತಿ ಮಾಡುತ್ತಿದ್ದಾಳೆ, ಒಬ್ಬಳು ಚೆನ್ನೈನಲ್ಲಿದ್ದಾಳೆ, ಇನ್ನೊಬ್ಬಳು ಯು.ಎಸ್.ಎ ನಲ್ಲಿದ್ದಾಳೆ. ಅಲ್ಲಿಗೆ ನಾವು ಹೋಗಿ ಬಂದು ಮಾಡುತ್ತೇವೆ. 2006 ರಿಂದ 8 ಬಾರಿ ಹೋಗಿ ಬಂದಿರುತ್ತೇವೆ.

2.ದಿನಾಂಕ 26-7-13 ರಂದು ನಾನು ಯು.ಎಸ್.ಎ ಯಲ್ಲಿದ್ದೆನು. ಆ ರೀತಿ ಮನೆ ಬಿಟ್ಟುಹೋಗುವಾಗ ನಮ್ಮ ಮನೆಯಲ್ಲಿರುವ ಬೆಲೆಬಾಳುವ ವಸ್ತುಗಳನ್ನು ಆರೋಪಿತರ ಮನೆಯಲ್ಲಿ ಇಟ್ಟುಹೋಗುತ್ತಿದ್ದೆವು. 26-7-13 ರಂದು ನಮಗೆ ಸೇರಿದ ಚಿನ್ನಾಭರಣಗಳನ್ನು ಆರೋಾಪಿತರಿಗೆ ಸೇರಿದ, ಕುವೆಂಪುನಗರದಲ್ಲಿರುವ ಕಾವೇರಿ ಗ್ರಾಮೀಣ ಬ್ಯಾಂಕ್ ಶಾಖೆಯಲ್ಲಿದ್ದ ಲಾಕರ್ ನಲ್ಲಿಟ್ಟು ಹೋಗಿದ್ದೆವು. ಸುಮಾರು 110 ರಿಂದ 115ಗ್ರಾಂ ಚಿನ್ನ ಇಟ್ಟುಹೋಗಿದ್ದೆವು. ನಾವು ಅಮೇರಿಕಾಕ್ಕೆ ಹೋದ ಬಗ್ಗೆ ಪಾಸ್ ಪೋರ್ಟ್ ಮತ್ತು ವೀಸಾವನ್ನು ಈ ದಿವಸ ಹಾಜರುಪಡಿಸುತ್ತಿದ್ದೇನೆ. ಸಾಕ್ಷಿಯು

ಹಾಜರುಪಡಿಸಿದ 3 ಪಾಸ್ ಪೋರ್ಟ್‌ನ್ನು **ನಿಡಿ-1** ಎಂದು ಗುರುತಿಸಲಾಯಿತು. (ವೀಸಾ ನಿಡಿ-1 ರಲ್ಲಿ ಸ್ಟ್ಯಾಂಪಿಂಗ್ ಆಗಿರುತ್ತದೆ) ಅದೇ ರೀತಿ ಗ್ಯಾಸ್ ಪಾಸ್‌ಬುಕ್ ಮತ್ತು ಸಿಲಿಂಡರ್ ನ್ನು ಕೂಡ ಅವರ ಮನೆಯಲ್ಲೇ ಇಟ್ಟು ಹೋಗುತ್ತಿದ್ದೆವು. ಇಂಗ್ಲೇಂಡ್ ನಲ್ಲಿರುವ ನನ್ನ ಮಗಳು ಸುಮಾರು 73 ಗ್ರಾಂ ಚಿನ್ನವನ್ನು 2013 ರಲ್ಲಿ ಆರೋಪಿತರ ಮನೆಯಲ್ಲಿ ಇಟ್ಟುಹೋಗಿದ್ದಳು.

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ವಿಶೇಷ ಅಭಿಯೋಜಕರಿಂದಃ**

(ಪಾಟೀಸವಾಲಿಗೆ ಸಮಯ ಕೋರಿದ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**